**ಅಸಲು ದಾವಾ ಸಂಖ್ಯೆಃ 320/2019 ಪಿ.ಡಬ್ಲ್ಯೂಃ 1**

**ಸಾಕ್ಷಿಯು ದಿನಾಂಕ 25.10.2021 ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ KBS ನ್ಯಾಯವಾದಿಗಳಿಂದಃ**

ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ, ಅದರಲ್ಲಿರುವ ಅಂಶಗಳನ್ನು ಅರ್ಥೈಸಿಕೊಂಡ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ದಾವೆಯನ್ನು ಹಾಕುವ ಕಾಲಕ್ಕೆ ದಾವೆಯ ಜೊತೆಗೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿಯು ದಿನಾಂಕ 12.03.1928 ರ ನೊಂದಾಯಿತ ಕ್ರಯ ಪತ್ರದ ಮೂಲ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ0.1 ಎಂದು, 1973 ರ ನೊಂದಾಯಿತ ಅಡಮಾನ ಪತ್ರದ ಮೂಲ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.2 ಎಂದು , ದಿನಾಂಕ 04.04.1974 ರ ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲ ದಾಖಲೆಯನ್ನು ಹಾಜರ ಪಡಿಸಿದ್ದು ಅದನ್ನು ನಿಪಿ.3 ಎಂದು, 19-06-19873 ರ ನೊಂದಯಿತ ಕ್ರಯ ಪತ್ರದ ದೃಡಿಕೃತ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.4 ಎಂದು , ದಿನಾಂಕ 12.09.1977 ರ ದೃಡಿಕೃತ ನೊಂದಾಯಿತ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.5 ಎಂದು , ಒಟ್ಟು 05 ಕೈ ಬರಹ ಪಹಣಿಯ ದೃಡಿಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 6 ರಿಂದ 10 ಎಂದು, ಗಣಕೀಕೃತ ಪಹಣಿ ಹಾಜರು ಪಡಿಸಿದ್ದು ಅದನ್ನು ನಿಪಿ.11 ಎಂದು ಮತ್ತು ಗಣಕೀಕೃತ ಮ್ಯೂಟೇಷನ್ ರಿಜಿಸ್ಟರ್ ಹಾಜರು ಪಡಿಸಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

**ಸಾ . ಹೇ . ಬಿ. ಮಾಡಿಸಲಾಯಿತು .**

**ಓ.ಹೇ.ಕೇ.ಸ.ಇದೆ**

**ಅಪರ ಸಿವಿಲ್ ನ್ಯಾಯಾಧೀಶರು**
**ನಾಗಮಂಗಲ**